ಸೂರ್ಯನ ತಪಸ್ಸು

ಕಥೆ: ಪರುತ್ತಿಯೂರ್ ಕೆ. ಸಂತಾನರಾಮನ್ ಚಿತ್ರ : ಶಂಕರ್

1 ಕೈಲಾಸ ಪರ್ವತದಲ್ಲಿ ಅನೇಕ ಮಂದಿ ಋಷಿಗಳು ತಪಸ್ಸು ಮಾಡುತ್ತಿದ್ದರು. ಒಂದು ದಿನ ಅವರ ನಡುವೆ ಕಾಲವ ಋಷಿ ಚಿಂತೆಗೀಡಾಗಿ ಕುಳಿತಿದ್ದ.

2 ಕಾಲವ ಋಷಿಗಳೆ! ನೀವು ಕಾಲವನ್ನು ಬಲ್ಲವರು. ಯಾಕೆ ಚಿಂತಿಸುತ್ತಿದ್ದೀರಿ?



ಶೀಘ್ರದಲ್ಲಿ ನಾನು ಕುಷ್ಠರೋಗಕ್ಕೆ ತುತ್ತಾಗಲಿದ್ದೇನೆ. ಇದನ್ನು ಯೋಚಿಸುತ್ತ ನನಗೆ ಚಿಂತೆಯುಂಟಾಗಿದೆ.

3 ಕಾಲವ ಋಷಿಗಳೆ, ಚಿಂತಿಸಬೇಡಿ. ನೀವು ತಪಸ್ಸು ಮಾಡಿ ನವಗ್ರಹಗಳ ಅನುಗ್ರಹ ಪಡೆಯಿರಿ. ಅವರ ಕೃಪೆ ದೊರಕಿದರೆ ನಿಮಗೆ ಏನೂ ಆಗದು.

ಹೌದೆ? ಒಳ್ಳೆಯದು. ನಾನು ಈಗಲೇ ತಪಸ್ಸಿಗೆ ತೊಡಗುತ್ತೇನೆ.

4 ಕಾಲವ ಋಷಿ ತನ್ನ ನಾಲ್ಕು ಕಡೆ ಅಗ್ನಿ , ಮೇಲೆ ಸೂರ್ಯ ಹೀಗೆ ಪಂಚಾಗ್ನಿ ತಪಸ್ಸನ್ನು ಮಾಡಿದ.



ಭಗವಾನ್ ಸೂರ್ಯದೇವ ಇತರ ನವಗ್ರಹಗಳೊಂದಿಗೆ ಪ್ರತ್ಯಕ್ಷನಾದ.

5

ಕಾಲವರೆ! ನಾವು ಸಂತುಷ್ಟರಾಗಿದ್ದೇವೆ. ಏನು ವರ ಬೇಕೋ ಕೇಳಿ.

ಓ ನವಗ್ರಹ ದೇವತೆಗಳೇ, ಶೀಘ್ರದಲ್ಲೇ ನನಗೆ ಕುಷ್ಠ ರೋಗ ತಗಲುವುದು. ದಯವಿಟ್ಟು ನನ್ನನ್ನು ಅದರಿಂದ ಪಾರುಮಾಡಿ.

ಋಷಿಗಳೆ, ಚಿಂತಿಸಬೇಡಿ. ನೀವು ಕೇಳಿದ ವರವನ್ನು ನಾವು ನೀಡುತ್ತೇವೆ.

ನಾರದ ಋಷಿಗಳು ಸತ್ಯಲೋಕಕ್ಕೆ ಬಂದರು. ಅವರು ಬ್ರಹ್ಮದೇವ ಹಾಗೂ ಸರಸ್ವತಿಯನ್ನು ಭೇಟಿಯಾದರು.

6

ನಾರದ, ಭೂಮಿಯಿಂದ ಯಾವ ವಾರ್ತೆಯನ್ನು ತಂದಿರುವೆ?

ಅಪ್ಪಾ, ಇತ್ತೀಚೆಗೆ ಕರ್ಮನಿಯಮ ಬದಲಾಗುತ್ತಿದೆ.

7

ಏನಾಯಿತು, ಮಗು?

ಅಮ್ಮಾ, ವಿದ್ಯಾಧಿದೇವತೆ! ನಿನಗೆ ತಿಳಿದಿಲ್ಲವೆ? ನವಗ್ರಹ ದೇವತೆಗಳು ವಿವೇಚನೆಯಿಲ್ಲದೆ ಕಾಲವ ಋಷಿಗೆ ಒಂದು ವರವನ್ನು ಕೊಟ್ಟಿದ್ದಾರೆ.

ಹೌದೆ? ಈಗಲೇ ನವಗ್ರಹಗಳನ್ನು ಇಲ್ಲಿಗೆ ಬರಹೇಳು.

8

ಭಗವಾನ್ ಪರಮೇಶ್ವರನ ಆಣತಿಯಂತೆ ಮಾನವರಿಗೆ, ಪಕ್ಷಪಾತವಿಲ್ಲದೆ ಅವರವರ ಕರ್ಮಫಲಗಳನ್ನು ನೀಡುವಂತೆ ನಿಮಗೆ ನಾವು ಕೇಳಿಕೊಂಡೆವು.

ಬ್ರಹ್ಮದೇವ! ನಮ್ಮನ್ನು ಕ್ಷಮಿಸಿ.



ಆದರೆ ನೀವು ನಿಮ್ಮ ಕರ್ತವ್ಯವನ್ನು ಮರೆತು, ನಿಮಗೆ ಇಷ್ಟಬಂದಂತೆ ಮಾಡಿದ್ದೀರಿ. ಆದ್ದರಿಂದ ಕಾಲವ ಋಷಿಗೆ ಬದಲಾಗಿ ನಿಮಗೇ ಕುಷ್ಠರೋಗ ತಗಲುವುದು.

9

ಓ ದೇವಾ! ಈ ಶಾಪದಿಂದ ನಮಗೆ ವಿಮೋಚನೆ ಎಂದು?

ನೀವು ಭೂಲೋಕಕ್ಕೆ ಹೋಗಿ. ಅಲ್ಲಿ ಚೋಳದೇಶದಲ್ಲಿ ಕಾವೇರೀ ನದೀತೀರದಲ್ಲಿರುವ ವೆಲ್ಲೂರುಕ್ಕು ಎಂಬ ಅರಣ್ಯದಲ್ಲಿ ತಪಸ್ಸು ಮಾಡಿ.

10

ನವಗ್ರಹ ದೇವತೆಗಳು ಕಾರ್ತಿಕ ಮಾಸದ ಭಾನುವಾರದಂದು ತಪಸ್ಸು ಮಾಡಲು ಆರಂಭಿಸಿದರು. 12 ವಾರಗಳವರೆಗೆ ಅವರು ಬ್ರಹ್ಮ, ವಿಷ್ಣು, ಮಹೇಶ್ವರನನ್ನು ಒಲಿಸಲು ತಪಸ್ಸು ಮಾಡಿದರು. ವೆಲ್ಲೂರುಕ್ಕು ಅರಣ್ಯದಲ್ಲಿ ಅವರಿಗೆ ಈ ಅವಧಿಯಲ್ಲಿ ಮೊಸರನ್ನವನ್ನು ಮಾತ್ರ ನೀಡಲಾಯಿತು. ತ್ರಿಮೂರ್ತಿಗಳು ಅವರ ಮುಂದೆ ಪ್ರತ್ಯಕ್ಷರಾದರು.

11

ನವಗ್ರಹ ದೇವತೆಗಳೇ! ನೀವೆಲ್ಲರೂ ರೋಗದಿಂದ ಮುಕ್ತರಾಗಿದ್ದೀರಿ. ಈ ಪ್ರದೇಶದಲ್ಲಿ ಯಾರು ನಿಮ್ಮ ಆರಾಧನೆ ಮಾಡುವರೋ ಅವರಿಗೆಲ್ಲ ನೀವು ವರವನ್ನು ನೀಡಬಹುದು.

ಮಹಾದೇವ! ಜನರು ಕೇಳಿದ ಎಲ್ಲ ವರಗಳನ್ನೂ ಈ ನವಗ್ರಹಗಳು ನೀಡುವುದು ಒಳ್ಳೆಯದೆ? ಅದರಿಂದ ಹಾನಿಯುಂಟಾಗದೆ?

12

ಚಿಂತಿಸಬೇಡ. ಇನ್ನುಮುಂದೆ ಈ ಪ್ರದೇಶವು ಸೂರ್ಯನ ದೇವಾಲಯವೆಂದೇ ಕರೆಯಲ್ಪಡುವುದು. ಇಲ್ಲಿ ನವಗ್ರಹಗಳು ನೆಲೆಸಿ, ಭಕ್ತರ ಬಯಕೆಯನ್ನು ಪೂರೈಸುವ ದೇವತೆಗಳಾಗುವುವು.



ಓ ತ್ರಿಮೂರ್ತಿಗಳೇ ನಾವು ನಿಮಗೆ ಕೃತಜ್ಞರಾಗಿದ್ದೇವೆ.

13

ಇಲ್ಲಿ ಒಂಬತ್ತು ಕೊಳಗಳು ಕಾಣಿಸಿಕೊಳ್ಳುವುವು. ಇಲ್ಲಿ 12 ವಾರಗಳ ಕಾಲ ಯಾರು ಸ್ನಾನ ಮಾಡಿ ಆರಾಧಿಸುವವರೋ ಅವರಿಗೆ ನವಗ್ರಹ ದೇವತೆಗಳ ಅನುಗ್ರಹ ಲಭಿಸುವುದು.



ಮಹಾದೇವ! ನಿನ್ನ ದಿವ್ಯ ಆಣತಿಯಂತೆ ನಾವು ಭಕ್ತರನ್ನೆಲ್ಲ ಹರಸೋಣ.

14

ರಾಜ ಪರೀಕ್ಷಿತ, ಚಿತ್ರಾಂಗದ ಪಾಂಡ್ಯ , ಪುರೂರವ, ಸೋಮಸನ್ಮಾನ, ಇಂದಿರ, ಧೂಮಕೇತು ಹಾಗೂ ನಳ ಚಕ್ರವರ್ತಿ ಇವರೆಲ್ಲ ಸೂರ್ಯ ದೇವಾಲಯದಲ್ಲಿ ನವಗ್ರಹಗಳನ್ನು ಆರಾಧಿಸಿ ಶಾಪಮುಕ್ತರಾದರು.